## ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಿರುವವರಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ:2:ಟಿಎಫ್‌ಪಿ:2020 ದಿ:30.05.2020
2.ಸರ್ಕಾರದ ಆದೇಶ ಸಂಖ್ಯೆ:ಇಡಿ:27:ಹೆಚ್‌ಪಿಸಿ:2021 ದಿ:19.03.2021.
3.ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ:425:ಗ್ರೂಪ್-ಡಿ/2017-18/ ನೇವಿ-1,ದಿನಾಂಕ:04.03.2018 ಮತ್ತು 22.11.2018.

ಪ್ರಸ್ತಾವನೆ:

ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/2/ಟಿಎಫ್‌ಪಿ/2020.ದಿನಾಂಕ:01.04.2020ರಲ್ಲಿ ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ(55)(2)(ಡಿ)ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಈ ನಿಯಮದಡಿ ಯಾವುದೇ ಅಂಶಕಾಲಿಕ, ಅಕುಶಲ/ನಿಪುಣ ಕೆಲಸಗಾರರನ್ನು ನೇಮಿಸಿಕೊಳ್ಳುವುದನ್ನು ನಿರ್ಬಂದಿಸಿದೆ. ಈ ಹಿನ್ನಲೆಯಲ್ಲಿ ಕಾಲೇಜುಗಳಲ್ಲಿ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಉಲ್ಲೇಖ(03)ರ ಈ ಕಛೇರಿಯ ಸುತ್ತೋಲೆಯಲ್ಲಿ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ "ಡಿ"ಗ್ರೂಪ್ ನೌಕರರನ್ನು ನೇಮಕ ಮಾಡಿಕೊಳ್ಳಲು ಅನುಮತಿಯನ್ನು ನೀಡಲಾಗಿರುತ್ತದೆ. ಸದರಿ ಸುತ್ತೋಲೆಯ ನಿರ್ದೇಶನದಂತೆ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳಿಗೆ ವೇತನ ಪಾವತಿಗಾಗಿ ಅನುದಾನವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

2020-21ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2202-03-103-2-01-034ರಡಿಯಲ್ಲಿ ಹೆಚ್ಚುವರಿಯಾಗಿ ಒದಗಿಸಿರುವ ರೂ.137.70 ಲಕ್ಷಗಳಲ್ಲಿ 07 ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 09 ಹೊರಗುತ್ತಿಗೆ ಸಿಬ್ಬಂದಿಗಳಿಗೆ ವೇತನ ಪಾವತಿಸಲು ರೂ.12,01,391/-(ರೂಪಾಯಿಗಳು ಹನ್ನೆರಡು ಲಕ್ಷದ ಒಂದು ಸಾವಿರದ ಮೂರುನೂರ ತೊಂಬತ್ತೊಂದು ಮಾತ್ರ)ಗಳನ್ನು ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಲು ಈ ಆದೇಶ

### ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ಹೊ.ಗು.ಅ/10/2020-21, ಬೆಂಗಳೂರು, ದಿ: 23.03.2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2020-21ನೇ ಸಾಲಿನ ಲೆಕ್ಕ ಶೀರ್ಷಿಕೆ:2202-03-103-2-01-034ರಡಿಯಲ್ಲಿ ಹೆಚ್ಚುವರಿಯಾಗಿ ಒದಗಿಸಿರುವ ರೂ.137.70ಲಕ್ಷಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಸಿಬ್ಬಂದಿಗಳ ವೇತನ ಪಾವತಿಗಾಗಿ ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಬಿಡುಗಡೆ

ಮಾಡಿರುವ ಅನುದಾನದಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದ ಪಟ್ಟಿಯಲ್ಲಿರುವ 07 ಕಾಲೇಜುಗಳಿಗೆ ರೂ.12,01,391/-(ರೂಪಾಯಿಗಳು ಹನ್ನೆರಡು ಲಕ್ಷದ ಒಂದು ಸಾವಿರದ ಮೂರುನೂರ ತೊಂಬತ್ತೊಂದು ಮಾತ್ರ)ಗಳ ಅನುದಾನವನ್ನು ಈ ಆದೇಶಕ್ಕೆ ಅನುಬಂಧಿಸಿರುವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಕೆಳಕಂಡ ಷರತ್ತುಗಳನ್ವಯ ಬಿಡುಗಡೆ ಮಾಡಲಾಗಿದೆ.

ಷರತ್ತುಗಳು:

1) "ಡಿ"ಗ್ರೂಪ್ ಸಿಬ್ಬಂದಿಗಳಿಗೆ ಸಂಭಾವನೆಯನ್ನು ಪಾವತಿಸುವಾಗ ಕನಿಷ್ಠ ವೇತನ ಕಾಯ್ದೆ,ಇಎಸ್ಐ & ಪಿಫ್ ಕಾಯ್ದೆಯನ್ನು ಪಾಲಿಸಲು ಕಟ್ಟುನಿಟ್ಟಾಗಿ ಆದೇಶಿಸಿದೆ.
2) ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸಿರುವ ಉದ್ದೇಶಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಅದರನ್ವಯವೇ ಪಾವತಿಸುವುದು.
3) ಸದರಿ ಅನುದಾನವನ್ನು ಕೆ-2 ತಂತ್ರಾಂಶದಲ್ಲಿ ಕ್ಲೇಮ್ ಮಾಡತಕ್ಕದ್ದು.
4) ಅನುದಾನ ಬಳಕೆಯಾದ ನಂತರ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

(ಇ-ಕಡತದಲ್ಲಿ ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿರುತ್ತದೆ.)

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

ಸಂಬಂಧಿಸಿದ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ..

ಪ್ರತಿಯನ್ನು

1. ಇಲಾಖಾವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ - ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
2. ಜಿಲ್ಲಾ ಖಜಾನಾಧಿಕಾರಿಗಳು ಜಿಲ್ಲಾಖಜಾನೆ ರಾಯಚೂರು/ಬೆಂಗಳೂರು ಗ್ರಾಮಾಂತರ /ದಕ್ಷಿಣಕನ್ನಡ/ ಚಿಕ್ಕಮಗಳೂರು/ ಬೀದರ/ಕಾರವಾರ/ವಿಜಯಪುರ
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರಕಛೇರಿ, ಬೆಂಗಳೂರು- ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ..
4. ಕಛೇರಿ ಪ್ರತಿ

ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ಹೊ.ಗು.ಅ/10/2020-21, ಬೆಂಗಳೂರು,

ದಿನಾಂಕ: 23.03.2021 ಆದೇಶಕ್ಕೆ ಅನುಬಂಧ

07 ಹೊರಗುತ್ತಿಗೆ "ಡಿ" ಗ್ರೂಪ್ ಸಿಬ್ಬಂದಿಗಳಿಗೆ ಮತ್ತು 02 ಡಾಟಾ ಎಂಟ್ರಿ ಆಪರೇಟರ್ಸ್‌ಗಳಿಗೆ 2020-21ನೇ ಸಾಲಿಗೆ ಬಾಕಿ ಇರುವ ವೇತನ ಪಾವತಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳು

| ಕ್ರಮ ಸಂಖ್ಯೆ | ಕಾಲೇಜಿನ ಹೆಸರು | ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆ | | ಅವಧಿ ತಿಂಗಳು | ಒಟ್ಟು ಮೊತ್ತ ರೂ.ಗಳಲ್ಲಿ |
|---|---|---|---|---|---|
| | | ಡಾಟಾ ಎಂಟ್ರಿ ಆಪರೇಟರ್ | ಡಿ-ಗ್ರೂಪ್ | | |
| 1 | 2 | 3 | 4 | 5 | 6 |
| 1 | ಸ.ಪ್ರದ.ಕಾ ಕಾವೂರು ಮಂಗಳೂರು | 0 | 1 | 10 | 138850 |
| 2 | ಸ.ಪ್ರ.ದ.ಕಾ ಚಿಟಗುಪ್ಪಾ | 0 | 1 | 2 | 22190 |
| 3 | ಸ.ಪ್ರ.ದ.ಕಾ ಮೂಡಿಗೆರೆ | 0 | 1 | 6 | 83310 |
| 4 | ಸ.ಪ್ರ.ದ.ಕಾ ಕುಮಟಾ | 1 | 1 | 5 | 192156 |
| 5 | ಸ.ಪ್ರ.ದ.ಕಾ ಬಸವನ ಬಾಗೇವಾಡಿ | 0 | 1 | 10 | 138850 |
| 6 | ಸ.ಪ್ರ.ದ.ಕಾ ತ್ಯಾಮಗೊಂಡ್ಲು | 1 | 1 | 10 | 306680 |
| 7 | ಸ.ಪ್ರ.ದ.ಕಾ ದೇವದುರ್ಗ | 0 | 1 | 23 | 319355 |
| ಒಟ್ಟು | | 2 | 7 | | 1201391 |

(ಹನ್ನೆರಡು ಲಕ್ಷದ ಒಂದು ಸಾವಿರದ ಮೂರುನೂರ ತೊಂಬತ್ತೊಂದು ರೂಪಾಯಿಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು